**ಕರ್ನಾಟಕ ಸರ್ಕಾರ**
**ರಾಷ್ಟ್ರೀಯ ಆರೋಗ್ಯ ಅಭಿಯಾನ**
**ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು**
**1ನೇ ಮಹಡಿ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-23**

**ಸಂಖ್ಯೆ: ಎನ್‌ಹೆಚ್‌ಎಂ/ಡಿಡಿ/ಐಎಂಎಂ/41/2020-21** **ದಿನಾಂಕ: 06.03.2021**

**ಇವರಿಗೆ,**

ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು,
ವಿಶೇಷ ಆಯುಕ್ತರು, ಬಿ.ಬಿ.ಎಂ.ಪಿ,

ವಿಷಯ *ರಾಜ್ಯದಲ್ಲಿ ಮಾರ್ಚ್ 8, 2021ರಿಂದ ಕೋವಿಡ್-19 ಲಸಿಕಾಕರಣವನ್ನು ತೀವ್ರಗೊಳಿಸುವ ಕುರಿತು.*

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಕೋವಿಡ್-19 ಲಸಿಕಾಕರಣವನ್ನು ಮಾರ್ಚ್ 8, 2021ರಿಂದ ತೀವ್ರಗೊಳಿಸಲು ನಿರ್ಧರಿಸಿದ್ದು, ಎಲ್ಲಾ ಜಿಲ್ಲೆಗಳು ಲಸಿಕಾಕರಣವನ್ನು ತೀವ್ರಗೊಳಿಸಲು ಈ ಕೆಳಕಂಡ ಅಂಶಗಳನ್ನು ಪಾಲಿಸಲು ತಿಳಿಸಲಾಗಿದೆ:

1. ಮಾರ್ಚ್ 8, 2021 ರಿಂದ (ಸೋಮವಾರ) ಎಲ್ಲಾ ಜಿಲ್ಲೆಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಗರ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳು ಹಾಗೂ ಕೋವಿಡ್-19 ಲಸಿಕಾಕರಣದಲ್ಲಿ ಪಾಲ್ಗೊಳ್ಳಲು ಒಪ್ಪಿರುವ ಆಯ್ದ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕಾ ಸತ್ರಗಳನ್ನು ನಡೆಸಲು ಯೋಜನೆಯನ್ನು ರೂಪಿಸುವುದು.

2. ಈ ಎಲ್ಲಾ ಕೋವಿಡ್-19 ಲಸಿಕಾ ಸತ್ರಗಳಲ್ಲಿ ಆರೋಗ್ಯ ಕಾರ್ಯಕರ್ತರು & ಮುಂಚೂಣಿ ಕಾರ್ಯಕರ್ತರ ಮೊದಲ ಮತ್ತು ಎರಡನೇ ಡೋಸ್ ನೀಡಲು ಸುಗಮಗೊಳಿಸುವುದು.

3. **ಲಸಿಕಾಕರಣದ ದಿನಗಳು:**
   - ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ – ಸೋಮವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರ (ವಾರಕ್ಕೆ 4 ದಿನಗಳು).
   - ಎಲ್ಲಾ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು, ಖಾಸಗಿ ಆಸ್ಪತ್ರೆಗಳು – ವಾರದ ಎಲ್ಲಾ ದಿನಗಳು
   - ನಗರ ಪ್ರದೇಶಗಳಲ್ಲಿನ ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅವಶ್ಯಕತೆ ಮತ್ತು ಕಾರ್ಯಸಾಧ್ಯತೆಗೆ ಅನುಗುಣವಾಗಿ ಭಾನುವಾರದ ಅರ್ಧ ದಿನ ಲಸಿಕಾಕರಣಕ್ಕೆ ಯೋಜಿಸಬಹುದು (ಜಿಲ್ಲೆಗಳು ನಿರ್ಧರಿಸಬೇಕು).

4. ಲಸಿಕಾ ಸತ್ರ ನಡೆಯುವ ಸಮಯ:
   - ಎಲ್ಲಾ ಸತ್ರಗಳನ್ನು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ನಡೆಸುವುದು.

- ಖಾಸಗಿ ಆಸ್ಪತ್ರೆಯವರು, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳ ಜೊತೆ ಚರ್ಚಿಸಿ, ಸಮನ್ವಯಿಸಿ ತಮಗೆ ಹೊಂದಿಕೆಯಾಗುವ ಸಮಯ/ಅವಧಿಯಲ್ಲಿ ಲಸಿಕಾಕರಣವನ್ನು ನಡೆಸಲು ಅನುಮತಿಸಲಾಗುವುದು.

5. ದಿನಕ್ಕೆ ಲಸಿಕಾಕರಣದ ಸಂಖ್ಯೆ: (ಕಾರ್ಯಸಾಧ್ಯತೆಯ ಪ್ರಕಾರ ಜಿಲ್ಲಾಡಳಿತ ನಿರ್ಧರಿಸುವುದು)
   - ಲಭ್ಯವಿರುವ ಸ್ಥಳ ಮತ್ತು ಮಾನವ ಸಂಪನ್ಮೂಲದ ಲಭ್ಯತೆಗನುಸಾರವಾಗಿ ಇರಬೇಕು.
   - ಆರ್.ಸಿ.ಹೆಚ್ ಅಧಿಕಾರಿರವರು ಲಸಿಕಾ ಸತ್ರಗಳ ನೋಡಲ್ ಅಧಿಕಾರಿಯವರ ಸಮನ್ವಯದಲ್ಲಿ ವೇಳಾಪಟ್ಟಿ ಸಿದ್ಧಪಡಿಸುವುದು.
   - ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದಿನಕ್ಕೆ 50-100 ಫಲಾನುಭವಿಗಳ ಲಸಿಕಾಕರಣಕ್ಕಾಗಿ ಯೋಜನೆ ಸಿದ್ಧಪಡಿಸಿಕೊಳ್ಳುವುದು.
   - ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ ದಿನಕ್ಕೆ 200 ಫಲಾನುಭವಿಗಳ ಲಸಿಕಾಕರಣಕ್ಕಾಗಿ ಯೋಜನೆ ಸಿದ್ಧಪಡಿಸಿಕೊಳ್ಳುವುದು.
   - ಜಿಲ್ಲಾ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು ಹೆಚ್ಚಿನ ಸಂಖ್ಯೆಯಲ್ಲಿ ಲಸಿಕಾಕರಣವನ್ನು ನಿಗದಿಪಡಿಸುವುದು.
   - 200 ಹಾಸಿಗೆಗಳ ಖಾಸಗಿ ಆಸ್ಪತ್ರೆಗಳಲ್ಲಿ ದಿನಕ್ಕೆ 100 ಫಲಾನುಭವಿಗಳಿಗೆ ಲಸಿಕಾಕರಣ ನಡೆಸಲು ಅನುಮತಿಸಲಾಗಿದೆ.
   - 200 ಹಾಸಿಗೆಗಳಿಗಿಂತ ಹೆಚ್ಚಿನ ಖಾಸಗಿ ಆಸ್ಪತ್ರೆಗಳು ಸ್ಥಳಾವಕಾಶದ ಲಭ್ಯತೆ ಮತ್ತು ಮಾನವ ಸಂಪನ್ಮೂಲದ ಲಭ್ಯತೆಗನುಸಾರ ಲಸಿಕಾಕರಣವನ್ನು ನಡೆಸುವುದು.
   - ಜಿಲ್ಲಾ ಆಸ್ಪತ್ರೆ, ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ದೊಡ್ಡ ಆಸ್ಪತ್ರೆಗಳಲ್ಲಿ ಲಸಿಕಾಕರಣವನ್ನು ವೃದ್ದಿಸಲು ಕ್ರಮವಹಿಸುವುದು.

6. ಎಲ್ಲಾ ಖಾಸಗಿ ಆಸ್ಪತ್ರೆಗಳು, ಎಲ್ಲಾ ತಾಲ್ಲೂಕು ಮಟ್ಟದ ಸಮುದಾಯ ಆರೋಗ್ಯ ಕೇಂದ್ರಗಳು, ಜಿಲ್ಲಾ ಆಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜುಗಳು ಕೋ–ವಿನ್ ಪೋರ್ಟಲ್‌ನಲ್ಲಿ ಸೈಟ್ ವ್ಯವಸ್ಥಾಪಕರನ್ನು ರೂಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸೈಟ್ ವ್ಯವಸ್ಥಾಪಕರನ್ನು ರೂಪಿಸಬಾರದು.

7. ಕೋವಿಡ್–19 ಲಸಿಕಾಕರಣವನ್ನು ಮಾಡಲು ಸಿದ್ಧವಿರುವ ಗುರುತಿಸಲ್ಪಟ್ಟ ಮತ್ತು ಗುರುತಿಸದೇ ಇರುವ (ಎಂಪನೇಲ್ಡ್ ಮತ್ತು ನಾನ್ ಎಂಪನೇಲ್ಡ್) ಖಾಸಗಿ ಆಸ್ಪತ್ರೆಗಳು, ಒಂದು ದಿನದಲ್ಲಿ ನೀಡಬಹುದಾದ ಚುಚ್ಚು ಮದ್ದಿನ ಗರಿಷ್ಠ ಮಟ್ಟದ ವಿವರ, ನೋಡಲ್ ಅಧಿಕಾರಿಗಳ ವಿವರಗಳು, ಆಸ್ಪತ್ರೆ ಐ.ಡಿ ಮತ್ತು ಲ್ಯಾಟಿಟ್ಯುಡ್ – ಲಾಂಗಿಟ್ಯುಡ್‌ನ ವಿವರಗಳನ್ನು ಮಾರ್ಚ್ 4, 2021 ರಂದು ಹಂಚಿಕೊಂಡ ಗೂಗಲ್ ಸ್ಪ್ರೆಡ್ ಶೀಟ್‌ನಲ್ಲಿ ಸಂಗ್ರಹಿಸಬೇಕು.

8. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಕೆಳಕಂಡ ತರಬೇತಿಯನ್ನು ನಡೆಸುವುದು.
   - ಕೋವಿನ್ ಪೋರ್ಟಲ್ ಕುರಿತು ತರಬೇತಿಗಳನ್ನು ಮತ್ತು ಪುನರ್ಮನನ ತರಬೇತಿಗಳನ್ನು ತಂಡಗಳಲ್ಲಿ ಅಥವಾ ವೀಡಿಯೋ ಸಂವಾದದ ಮೂಲಕ ನಡೆಸುವುದು.
   - ವೈದ್ಯಕೀಯ ಅಧಿಕಾರಿಗಳು, ಮೇಲ್ವಿಚಾರಕರು, ವ್ಯಾಕ್ಸಿನೇಟರ್‌ಗಳು, ಡೇಟಾ ವ್ಯವಸ್ಥಾಪಕರು, ಕೋಲ್ಡ್ ಚೈನ್ ಹ್ಯಾಂಡ್ಲರ್ಸ್‌ಗಳು, ಇತ್ಯಾದಿಯವರು ಭಾಗವಹಿಸುವುದು.
   - ಖಾಸಗಿ ಆಸ್ಪತ್ರೆಗಳಲ್ಲಿಯೂ ಪುನರ್ಮನನ ತರಬೇತಿಗಳನ್ನು ನಡೆಸುವುದು.

- ಎಇಎಫ್ಐ ನಿರ್ವಹಣೆ

9. ಮಾರ್ಚ್ 8, 2021 ರಿಂದ ಮಾರ್ಚ್ 20 ರವರೆಗೆ ಈ ಕೆಳಕಂಡಂತೆ ಸತ್ರಗಳನ್ನು ಯೋಜಿಸುವುದು.
   - ದಿನಾಂಕದೊಂದಿಗೆ ವೇಳಾಪಟ್ಟಿ ತಯಾರಿಸುವುದು.
   - ರಜಾ ದಿನಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಾರ್ವತ್ರಿಕ ಲಸಿಕಾ ದಿನ (ಗುರುವಾರ) ಹೊರತು ಪಡಿಸಿ ಯೋಜಿಸುವುದು.
   - ಎಲ್ಲಾ ಜಿಲ್ಲಾ ನಿಯಂತ್ರಣ ಕೊಠಡಿಗಳು, ತಮ್ಮ ಜಿಲ್ಲೆಯಲ್ಲಿನ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ನಡೆಸಬಹುದಾದ ಲಸಿಕಾ ಸತ್ರಗಳ ವೇಳಾಪಟ್ಟಿಯನ್ನು (Session Scheduling) ಕೋವಿನ್ ಪೋರ್ಟಲ್‌ನಲ್ಲಿ ಮಾರ್ಚ್ 6, 2021 ರೊಳಗೆ (ಶನಿವಾರ) ಇಂದೀಕರಿಸುವ ಕ್ರಿಯೆಯನ್ನು ಪೂರ್ಣಗೊಳಿಸಬೇಕು.

10. ಕೋವಿನ್ ಪೋರ್ಟಲ್‌ನಲ್ಲಿ ಈ ಕೆಳಕಂಡ ಸತ್ರಗಳನ್ನು ನಿಷ್ಕ್ರಿಯಗೊಳಿಸುವುದು
    - ಲಸಿಕಾಕರಣಕ್ಕಾಗಿ ನಿಗದಿಪಡಿಸದ ಲಸಿಕಾ ಸತ್ರಗಳು
    - ಅನೇಕ ಹೆಸರುಗಳೊಂದಿಗೆ ಇಂದೀಕರಣಗೊಂಡ ಅಂಗನವಾಡಿ ಕೇಂದ್ರಗಳು, ಶಾಲೆಗಳು, ಉಪ ಕೇಂದ್ರಗಳ ಲಸಿಕಾ ಸತ್ರಗಳು
    - ಒಂದು ಆಸ್ಪತ್ರೆಯ ಸತ್ರದಲ್ಲಿ ಇಂಜೆಕ್ಷನ್ ಹೊರೆಯ ಆಧಾರದ ಮೇಲೆ ಬಹು ವ್ಯಾಕ್ಸಿನೇಟರ್‌ಗಳನ್ನು ಯೋಜಿಸಬಹುದು.

11. ಎಲ್ಲಾ ಜಿಲ್ಲೆಯ ಜಿಲ್ಲಾ ನಿಯಂತ್ರಣ ಕೊಠಡಿಯಲ್ಲಿ ಐ.ಟಿ ತಂಡದ ಬೆಂಬಲ ಇರಬೇಕು ಮತ್ತು ಉಲ್ಬಣಗೊಂಡ ಎಲ್ಲಾ ಐ.ಟಿ ಸಮಸ್ಯೆಗಳನ್ನು ಕೂಡಲೇ ಜಿಲ್ಲಾ ಮಟ್ಟದಲ್ಲಿಯೇ ಸರಿಪಡಿಸುವುದು.

12. ಫಲಾನುಭವಿಗಳನ್ನು ಸಕ್ರಿಯೆವಾಗಿ ಸಜ್ಜುಗೊಳಿಸಲು ಯೋಜನೆ ರೂಪಿಸುವುದು.
    - 2011 ರ ಜನಗಣತಿಯ ಪ್ರಕಾರ, ಹಿರಿಯ ನಾಗರಿಕರ ಒಟ್ಟು ಸಂಖ್ಯೆಯ 7.8% ಆಗಿದೆ.
    - ಆಶಾಗಳಿಂದ ಗ್ರಾಮವಾರು, ಉಪ–ಕೇಂದ್ರವಾರು ಹಿರಿಯ ನಾಗರಿಕರ ಪಟ್ಟಿ ತಯಾರಿಸುವುದು
    - ನಗರ ಪ್ರದೇಶಗಳನ್ನು ಮಹಿಳಾ ಸಂಘಗಳು (ಎಂ.ಎ.ಎಸ್) ಮೂಲಕ ಸಜ್ಜುಗೊಳಿಸುವುದು.
    - ನಗರ ಪ್ರದೇಶಗಳಲ್ಲಿ ನಿವಾಸಿ ಕಲ್ಯಾಣ ಸಂಘಗಳು ಪಾಲ್ಗೊಳ್ಳುವುದು
    - ವೃದ್ಧಾಶ್ರಮದಿಂದ ಮತ್ತು ದೀರ್ಘಾವಧಿಯಲ್ಲಿ ಆರೈಕೆ ಸೌಲಭ್ಯವಿರುವ ಕೇಂದ್ರಗಳ ಸಜ್ಜುಗೊಳಿಸುವುದು.
    - ಲಸಿಕಾಕರಣದ ದಿನ 1–2 ಗ್ರಾಮಗಳನ್ನು ಹತ್ತಿರದ ಪ್ರಾ.ಆ.ಕೇಂದ್ರ ಪ್ರಾ.ಆ.ಕೇಂದ್ರ ಅಥವಾ ಆರೋಗ್ಯ ಸಂಸ್ಥೆಗಳಲ್ಲಿ ಸಜ್ಜುಗೊಳಿಸುವುದು.
    - ಸುಗಮ ಸಮಂಜಸತೆಗಳು – ನಿರ್ದಿಷ್ಟ ದಿನಗಳಲ್ಲಿ ಫಲಾನುಭವಿಗಳಿಗೆ ಹಂಚಿಕೆ ಮಾಡುವುದು.
    - ಪ್ರತಿ ಆಶಾರವರು ದಿನಕ್ಕೆ 5–10 ಫಲಾನುಭವಿಗಳನ್ನು ಸಜ್ಜುಗೊಳಿಸುವುದು.
    - ಈ ಫಲಾನುಭವಿಗಳಿಗೆ ನಿರ್ದಿಷ್ಟ ದಿನದಂದು ಆನ್‌ಸೈಟ್ (ವಾಕ್–ಇನ್) ನೋಂದಣಿಯನ್ನು ಕಲ್ಪಿಸುವುದು.

13. ಲಸಿಕೆ ಮತ್ತು ಸಿರಿಂಜ್‌ಗಳು
    - ಮಾರ್ಚ್ 7, 2021ರೊಳಗೆ ಎಲ್ಲಾ ಆರೋಗ್ಯ ಸೌಲಭ್ಯಗಳಿಗೆ ಸಮಯೋಚಿತ ವಿತರಣೆಯನ್ನು ಖಚಿತಪಡಿಸಿವುದು.

- ನಿರ್ವಹಣೆ ಮಾಡುವ ಖಾಸಗಿ ಆಸ್ಪತ್ರೆಗಳಿಗೆ ಹಸ್ತಾಂತರಿಸುವುದು ಮತ್ತು ಎನ್.ಎಚ್.ಎ ಖಾತೆಗೆ ಮೊತ್ತವನ್ನು ಜಮಾ ಮಾಡುವುದು.

ಕೋವಿಡ್-19 ಕಾರ್ಯ ಚಟುವಟಿಕೆಯನ್ನು ತ್ವರಿತಗೊಳಿಸಲು ಈ ಮೇಲ್ಕಂಡ ಅಂಶಗಳನ್ನು ಎಲ್ಲಾ ಜಿಲ್ಲೆಗಳು ಈ ಕೂಡಲೇ ಅನುಷ್ಠಾನಗೊಳಿಸಲು ತಿಳಿಸಲಾಗಿದೆ.

**ಅಭಿಯಾನ ನಿರ್ದೇಶಕರು**
**ರಾಷ್ಟ್ರೀಯ ಆರೋಗ್ಯ ಅಭಿಯಾನ**
**ಬೆಂಗಳೂರು**

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ,**

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು.
2. ಮುಖ್ಯ ಆರೋಗ್ಯಾಧಿಕಾರಿಗಳು(ಸಾರ್ವಜನಿಕ ಆರೋಗ್ಯ), ಬಿಬಿಎಂಪಿ.
3. ಎಲ್ಲಾ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳು.
4. ಲಸಿಕಾಧಿಕಾರಿಗಳು, ಬಿಬಿಎಂಪಿ.

**ಪ್ರತಿಯನ್ನು ಮಾಹಿತಿಗಾಗಿ,**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ.
2. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
4. ಯೋಜನಾ ನಿರ್ದೇಶಕರು (ಆರ್‌ಸಿಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
5. ಅಪರ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
6. ಉಪ ನಿರ್ದೇಶಕರು(ಲಸಿಕೆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
7. ಉಪ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
8. ಕಛೇರಿ ಪ್ರತಿ.